ಅಸಲು ದಾವೆ ನಂಃ 66/2018 ಡಿ ಡಬ್ಲ್ಯೂ1- ಶಿವನಪ್ಪ ತಳವಾರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 08/08/2024 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ SVC ವಕೀಲರಿಂದಃ**

1. ಯಲ್ಲಪ್ಪನ ಹೆಂಡತಿಯ ಹೆಸರು ರಂಗವ್ವ. ರಂಗವ್ವನ ತಂದೆ ತಾಯಿ ಹೆಸರು ಗೊತ್ತಿಲ್ಲ. ರಂಗವ್ವನ ತಾಯಿಯ ಹೆಸರು ಹನಮವ್ವ ಎಂದರೆ ನಿಜ. ಹನಮವ್ವನಿಗೆ ಲಕ್ಷ್ಮವ್ವ ಮತ್ತು ಯಲ್ಲಪ್ಪ ಎಂಬ ಅಣ್ಣ ಮತ್ತು ತಂಗಿ ಇದ್ದರು ಎಂದರೆ ನನಗೆ ಗೊತ್ತಿಲ್ಲ, ನಮ್ಮ ಮನೆತನಕ್ಕೆ ಸಂಬಂಧ ಇಲ್ಲಾ ಎಂದು ಹೇಳುತ್ತಾರೆ. ಹನಮವ್ವನಿಗೆ ರಂಗವ್ವ , ಮುದಿಯವ್ವ, ಲಚ್ಚವ್ವ ಮತ್ತು ಫಕ್ಕೀರವ್ವ ಎಂಬ ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಮುದಿಯವ್ವನ ಮಗ ಯಲ್ಲಪ್ಪ ಎಂದರೆ ನಿಜ. ಮುದಿಯವ್ವನಿಗೆ ಮರಿಯಪ್ಪ ಎಂಬ ಮಗ ಇದ್ದಾ ಎಂದು ಹೇಳುತ್ತಾರೆ. ಮರಿಯಪ್ಪನ ತಾಯಿಯ ಹೆಸರು ಮುದಿಯವ್ವ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದಿಯವ್ವನ ಗಂಡನ ಹೆಸರು ಹನಮಪ್ಪ.

2. ಹನಮಪ್ಪ ಮತ್ತು ಮುದಿಯವ್ವನಿಗೆ ಮರಿಯಪ್ಪ ಮತ್ತು ಯಲ್ಲಪ್ಪ ಎಂಬ ಮಕ್ಕಳು ಇರುತ್ತಾರೆ. ಇಬ್ಬರು ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನಮಪ್ಪನಿಗೆ ಮರಿಯಪ್ಪ, ಹನಮವ್ವ , ಲಕ್ಷ್ಮವ್ವ ಮತ್ತು ಯಲ್ಲಪ್ಪ ಎಂಬ ಮಕ್ಕಳು ಎಂದರೆ ಸಾಕ್ಷಿ ಅವರು ನಮಗೆ ಸಂಬಂಧ ಇಲ್ಲಾ ಎಂದು ಹೇಳುತ್ತಾರೆ.ದಾವಾ ಆಸ್ತಿ ನಮಗೆ ಸಂಬಂಧಪಟ್ಟಿದ್ದು. ದಾವಾ ಆಸ್ತಿ ಮೂಲತಃ ಹನಮಪ್ಪನಿಗೆ ಸಂಬಂಧಪಟ್ಟಿದ್ದು. ರಿ.ಸ.ನಂ. 158/7 , 160/2 ,160/3 ಈ ಎಲ್ಲಾ ಆಸ್ತಿಗಳು ಹನಮಪ್ಪನಿಗೆ ಸಂಬಂದಪಟ್ಟಿದ್ದವು. OS NO.27/2015 ರಲ್ಲಿ ನಾನು ಶಿವಾನಂದ, ಮಲ್ಲವ್ವ, ಫಕ್ಕೀರವ್ವ ಮತ್ತು ಭೀಮವ್ವ, ಪರಶುರಾಮ, ಬಸಪ್ಪ, ಶರಣಪ್ಪ ಇವರನ್ನು ಮಾತ್ರ ಪಾರ್ಟಿ ಮಾಡಿದ್ದೇ , ಅದರಲ್ಲಿ ಯಲ್ಲಪ್ಪನನ್ನು ಪಾರ್ಟಿ ಮಾಡಿರಲಿಲ್ಲಾ ಎಂದರೆ ಸಾಕ್ಷಿ ಯಲ್ಲಪ್ಪ ಆತ ತೀರಿಕೊಂಡಿದ್ದಾ ಎಂದು ಹೇಳುತ್ತಾರೆ. ಯಲ್ಲಪ್ಪ ಯಾವ ಇಸವಿಯಂದು ತೀರಿಕೂಂಡು ಎಂದು ನನಗೆ ಗೊತ್ತಿಲ್ಲ. ಯಲ್ಲಪ್ಪನ ಹೆಂಡತಿ ರಂಗವ್ವ 2015-16 ರಲ್ಲಿ ತೀರಿಕೊಂಡಿರಬಹುದು.ಯಲ್ಲಪ್ಪ ನಾನು ಸಣ್ಣವನಿದ್ದಾಗಲೇ ತೀರಿಕೊಂಡಿದ್ದಾನೆ ಎಂದು ತೋರಿಸಲು ಆತನ ಮರಣ ಪ್ರಮಾಣ ಪತ್ರವನ್ನು ಹಾಜರುಮಾಡಿಲ್ಲ. ಸಾಕ್ಷಿ ಆತನ ಮರಣ ಉತಾರ ಇಲ್ಲಾ ಎಂದು ಹೇಳುತ್ತಾರೆ. ಅಸೂಟಿ ಗ್ರಾಮದ ಸರ್ವೇ ನಂಬರ 159/1 ಇದರ ಚೆಕ್ ಬಂದಿ ಹೇಳಲು ಬರುತ್ತದೆ. ಉತ್ತರಕ್ಕೆಃ ಹಳ್ಳ, ದಕ್ಷಿಣಕ್ಕೆಃ ಕೆನಾಲ್, ಪೂರ್ವಕ್ಕೆಃ ಯಲ್ಲವ್ವ ಕೋಂ ಯಲ್ಲಪ್ಪ ತಳವಾರ ಇವರ ಹೊಲ. ಪಶ್ಚಿಮಕ್ಕೆಃ ಹನಮಪ್ಪ ತಂದೆ ರಂಗಪ್ಪ ತಳವಾರ ಇವರ ಹೊಲ ಇದೆ. ಈ ಮೇಲೆ ಹೇಳಿದ ಚೆಕ್ ಬಂದಿಯಲ್ಲ್ ಸದರಿ ಆಸ್ತಿ ಇಲ್ಲಾ ಎಂದರೆ ನಿಜ.

3. ಹನಮಪ್ಪನಿಗ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ಮೊದಲನೇ ಹೆಂಡತಿಯ ಹೆಸರು ಗೊತ್ತಿಲ್ಲ. ಮೊದಲನೇ ಹೆಂಡತಿಯ ಮಗನ ಹೆಸರು ಮರಿಯಪ್ಪ ಮತ್ತು ಎರಡನೇ ಹೆಂಡತಿಯ ಹೆಸರು

ಮುದಿಯವ್ವ ಎಂದರೆ ಸಾಕ್ಷಿ ಒಬ್ಬಳೇ ಹೆಂಡತಿ ಇದ್ದಳು ಎಂದು ಹೇಳುತ್ತಾರೆ. ಹನಮಪ್ಪನಿಗೆ ಯಲ್ಲಪ್ಪ ಮತ್ತು ಮರಿಯಪ್ಪ ಇಬ್ಬರೇ ಮಕ್ಕಳು ಇರುವುದಿಲ್ಲಾ ಎಂದರೆ ಸರಿಯಲ್ಲ.

4. ಮುದಿಯವ್ವನ ಮಗಳು ಹನಮವ್ವ ಎಂದರೆ ಸರಿಯಲ್ಲ. ಹನಮವ್ವನ ಮಗಳು ರಂಗವ್ವನನ್ನು ಯಲ್ಲಪ್ಪನಿಗೆ ಮದುವೆ ಮಾಡಿ ಕೊಡಲಾಗಿದೆ ಎಂದರೆ ನಿಜ. ಲಕ್ಷ್ಮವ್ವನ ಮಗಳು ಯಮನವ್ವ ಎಂದರೆ ನನಗೆ ಗೊತ್ತಿಲ್ಲ. ಯಮನವ್ವನಿಗೆ ಫಕ್ಕೀರವ್ವ ಎಂಬ ಮಗಳು ಹಾಗೂ ಫಕ್ಕೀರವ್ವನಿಗೆ ಶಿವಯೋಗಿ ಮತ್ತು ಹನಮಪ್ಪ ಎಂಬ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಯಲ್ಲಪ್ಪ ಮತ್ತು ರಂಗವ್ವನಿಗೆ ಮಕ್ಕಳು ಆಗದ ಕಾರಣ ಅವರು ಹನಮಪ್ಪನನ್ನು ದತ್ತಕ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಯಲ್ಲಪ್ಪ ಮತ್ತು ರಂಗವ್ವ ಇವರು ಸಾಯಿವ ಕಾಲಕ್ಕೆ ನಾನು ಮತ್ತು ನನ್ನ ಕಾಕ ಬಸಪ್ಪ ನೋಡಿಕೊಂಡಿದ್ದೇವೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸರ್ವೇ ನಂಬರ 153/3 ಈಗ ನನ್ನ ಕಾಕ ಫಕ್ಕೀರವ್ವ ಮತ್ತು ಬಸವ್ವ ಇವರ ಹೆಸರಿನಲ್ಲಿ ಇದೆ. ಫಕ್ಕೀರವ್ವ ಮತ್ತು ಬಸವ್ವ ಇವರ ಹೆಸರಿಗೆ ನಾವುಗಳೇ ಕೋರ್ಟ್ ನಲ್ಲಿ OS 27/2015 ರಲ್ಲಿ ರಾಜೀ ಡಿಕ್ರಿ ಮಾಡಿಕೊಂಡಿದ್ದೇವೆ. OS 27/2015 ರಲ್ಲಿ ಅಸೂಟಿ ಗ್ರಾಮ ಸರ್ವೇ ನಂಬರ 153/3 ಇರಲಿಲ್ಲಾ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಕಬ್ಜಾವನ್ನು ನಾನು ಮತ್ತು ನನ್ನ ಕಾಕ ಮತ್ತು ನನ್ನ ದೊಡ್ಡವ್ವ ಮಾಡುತ್ತೇವೆ. ಸದರಿ ಆಸ್ತಿಗಳ ಮೇಲೆ ಬೆಳೆ ಸಾಲ ತೆಗೆದುಕೊಂಡಿಲ್ಲ. ಸದರಿ ಆಸ್ತಿಗಳಲ್ಲಿ ಬೆಳೆ ಬೆಳೆದು, ಅವುಗಳನ್ನು ಮಾರಾಟ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಮಾಡಿಲ್ಲ. ಸದರಿ ಆಸ್ತಿಯಲ್ಲಿ ನಾವು ಕಬ್ಜಾದಲ್ಲಿ ಇಲ್ಲಾ ಎಂದರೆ ಸರಿಯಲ್ಲ. ಯಲ್ಲಪ್ಪ ಮತ್ತು ರಂಗವ್ವನಿಗೆ ಗೊತ್ತಾಗದ ಹಾಗೇ ಬಸಪ್ಪ, ರಂಗಪ್ಪ, ಹನಮಪ್ಪ, ಫಕ್ಕೀರಪ್ಪ ಇವರ ಹೆಸರು ಕಾಣಿಸಿದ್ದೇವೆ ಎಂದರೆ ಸರಿಯಲ್ಲ. ಸರ್ವೇ ನಂಬರ 158/7 , 160/2, 160/3 ಆಸ್ತಿಗಳು ನಮ್ಮ ಹೆಸರಿಗೆ ಬಂದಿದ್ದರೂ ಸಹದಾವಾ ಆಸ್ತಿಯನ್ನು ಲಪಟಾಯಿಸಬೇಕು ಎಂದು ನಮ್ಮ ಹೆಸರನ್ನು ಕಾಣಿಸಿದ್ದೇವೆ ಎಂದರೆ ಸರಿಯಲ್ಲ. ರಂಗವ್ವ ತೀರಿಕೊಳ್ಳುವ ಮುಂಚೆ ನಮ್ಮ ಮನೆಯಲ್ಲಿಯೇ ಇದ್ದಳು. ರಂಗವ್ವನ ಆಧಾರ ಕಾರ್ಡ ಇರಲಿಲ್ಲ, ಅವಳು ಮಾಡಿಸಿಕೊಂಡಿರಲಿಲ್ಲ. ನಮ್ಮದು ರೇಶನ್ ಕಾರ್ಡ ಇದೆ. ಸದರಿ ರೇಶನ್ ಕಾರ್ಡನಲ್ಲಿ ರಂಗವ್ವನ ಹೆಸರು ಇಲ್ಲ. ರಂಗವ್ವ ನಮ್ಮ ಮನೆಯಲ್ಲಿ ಇದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಂಗವ್ವನ ಮರಣ ಉತಾರವನ್ನು ನ್ಯಾಯಾಲಯಕ್ಕೆ ಹಾಜರುಮಾಡಬಲ್ಲೆ. ದಾವಾ ಆಸ್ತಿಗಳನ್ನು ನಾವು ಲಪಟಾಯಿಸಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನನ್ನ ಕೈಪಿಯತ್ತನ್ನು ಬರೆಯಲು ನಾನೇ ಮಾಹಿತಿ ಕೊಟ್ಟಿದ್ದೇನೆ. ನಾನು ಹೇಳಿದ್ದನ್ನು ವಕೀಲರು ಇಂಗ್ಲೀಷ್ ನಲ್ಲಿ ಬರೆದು ಹಾಕಿದ್ದಾರೆ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**( ಆದಿತ್ಯ ಆರ್ ಕಲಾಲ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.